ಕರ್ನಾಟಕ ವಿಧಾನ ಸಭೆ

ಶುಕ್ರವಾರ 13ನೇ ಏಪ್ರಿಲ್ 2007 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 : 58 ಗಂಟೆಗೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

(ಸದನವು ಬೆಳಿಗ್ಗೆ 10 ಗಂಟೆ 58 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರಗಳು :

(ಅ) ರಾಜ್ಯದಲ್ಲಿ ಉಂಟಾಗಿರುವ ಬರಗಾಲದ ಬಗ್ಗೆ :

ಅಧ್ಯಕ್ಷರು : – ಮಾಧುಸ್ವಾಮಿಗಳೇ ನಿಮ್ಮ ನಿಲುವಳಿ ಸೂಚನೆ ಪ್ರಾರಂಭಿಕ ಕೋರಿಕೆಯನ್ನು 5 ನಿಮಿಷದಲ್ಲಿ ಮುಗಿಸಿ.

ಶ್ರೀ ಎನ್. ಧರ್ಮಸಿಂಗ್ :– ಅಧ್ಯಕ್ಷರೇ ನಿನ್ನೆ ನಾವು ಬರಗಾಲದ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದೇವೆ. ನಿನ್ನೆಯೆಲ್ಲ ಬಿಲ್ಸ್ ತಗೊಂಡಿರಿ. ಇವತ್ತು ಸದನದ ಕಡೇ ದಿನ. ಇದರ ಬಗ್ಗೆ ಚರ್ಚೆಯಾಗಬೇಕು ಅಂತ ಪ್ರಕಾಶರು ಒಪ್ಪಿದ್ದಾರೆ. ಅದಕ್ಕೇ ಇದನ್ನು ಮೊದಲು ತಗೊಳ್ಳಿ.

ಅಧ್ಯಕ್ಷರು :– ಅದಕ್ಕೆ ಎರಡು ಗಂಟೆ ಕೊಡುತ್ತೇನೆ. ಹೇಳಿದ್ದೇನಲ್ಲ.

ಶ್ರೀ ಎನ್. ಧರ್ಮಸಿಂಗ್ :– ಮತ್ತೊಂದು ಹಕ್ಕುಚ್ಯುತಿ ಸೂಚನೆ ನೋಟೀಸ್ ಕೊಟ್ಟಿದ್ದೇವೆ. ಹಕ್ಕುಚ್ಯುತಿಯದು. ಗುಲ್ಬರ್ಗಾದಲ್ಲಿ ನಿನ್ನೆ ಹೇಳಿಕೆ ಕೊಡುತ್ತಾ ಇದ್ದಾರೆ. ಇಲ್ಲಿ ಸಭೆ ನಡೆಯುತ್ತಿರುವಾಗ ವಿಕಾಸಯಾತ್ರೆ ಮಾಡಿಕೊಂಡು 14 ಸಾವಿರ ಕೋಟಿ ಕೊಡುತ್ತೇನೆ ಅಂದಿದ್ದಾರೆ. ಇದೇನು? ಅರ್ಥವಾಗುತ್ತಿಲ್ಲ. ಸಂಸದೀಯ ವ್ಯವಹಾರಗಳ ಸಚಿವರು ಹೇಳಬೇಕು.

ಅಧ್ಯಕ್ಷರು :– ಪ್ರಶ್ನೋತ್ತರ ಆದ ಮೇಲೆ ಅವಕಾಶ ಕೊಡುತ್ತೇನೆ.

(11 : 00 ಗಂಟೆ)

ಶ್ರೀ ಎನ್. ಧರ್ಮಸಿಂಗ್ :- Question hour ಆದಮೇಲೆ ಅಂದರೆ ಯಾವಾಗ ಕೊಡುತ್ತೀರಿ?

ಅಧ್ಯಕ್ಷರು :- ನಿಮಗೆ ಸಾಕಷ್ಟು ಸಮಯಾವಕಾಶವನ್ನು ಕೊಡುತ್ತೇನೆ.

ಶ್ರೀ ಧರ್ಮಸಿಂಗ್ :- ಮತ್ತೆ ಈಗ ಚರ್ಚೆಯನ್ನು ಪ್ರಾರಂಭ ಮಾಡಬೇಕು. ಮಿಕ್ಕ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಅದು ಕೂಡ ಮಹತ್ವವಾದ ವಿಷಯ. ಇವತ್ತು ಕೊನೆಯ ದಿನ ಇದೆ. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ.

ಅಧ್ಯಕ್ಷರು :- ಕೊಡುತ್ತೇನೆ.

ಶ್ರೀ ಧರ್ಮಸಿಂಗ್ :- ಕೇಂದ್ರದಿಂದ ಬಂದಂಥ ಹಣ ಇದೆ. ಹಣ ಬಿಡುಗಡೆ ಮಾಡಿಲ್ಲ. ಎಲ್ಲ ಕಡೆ ಇವತ್ತು ಹೇಳಿದ್ದೀರಿ.

ಅಧ್ಯಕ್ಷರು :- ದಯಮಾಡಿ ಸಹಕರಿಸಿ. ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಧರ್ಮಸಿಂಗ್ :- ನಿನ್ನೆ ಸಂಸದೀಯ ವ್ಯವಹಾರಗಳ ಮಂತ್ರಿಗಳು ಹೇಳಿದ್ದಕ್ಕೆ ಒಪ್ಪಿದ್ದೇವೆ. ಪ್ರಕಾಶ್ ಅವರೇ, ತಾವು ಹೇಳಬೇಕು. ನೀವು ಹೇಳಿದ್ದಕ್ಕೆ ನಿನ್ನೆ ನಾವು ಸಹಕಾರ ಕೊಟ್ಟಿದ್ದೇವೆ. ಬಿಲ್‌ಗಳನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಇವತ್ತು ಕೊನೆಯ ದಿನ ಇದೆ. ಪ್ರಪ್ರಥಮವಾಗಿ ಬರಗಾಲದ ಬಗ್ಗೆ ಚರ್ಚೆ ಆಗಬೇಕೆಂದು ಆಶ್ವಾಸನೆಯನ್ನು ತಾವು ಕೊಟ್ಟಿದ್ದೀರಿ. ಎರಡು ಗಂಟೆಗಳ ಕಾಲ ಚರ್ಚೆಯನ್ನು ಮಾಡುತ್ತೇವೆಂದು ಹೇಳಿದ್ದೇವೆ. ಅದರ ಬಗ್ಗೆ ಚರ್ಚೆ ಆಗಲಿ. ಆ ನಂತರ ಮಾಧುಸ್ವಾಮಿ ಅವರದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ಅದೇನು Preliminary ಎನ್ನುವುದನ್ನು ಕೇಳುತ್ತೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- Adjournment motion ಅನ್ನು ಕೊಟ್ಟಿದ್ದೇವೆ. ಅದನ್ನು ಪ್ರಸ್ತಾಪ ಮಾಡುವುದಕ್ಕೆ ಐದು ನಿಮಿಷ ಅವಕಾಶವನ್ನು ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಧರ್ಮಸಿಂಗ್ ಅವರೇ, ನಿಮಗೆ ಅವಕಾಶವನ್ನು ನಾನು ಕೊಡುತ್ತೇನೆ ಸಾರ್.

ಶ್ರೀ ಧರ್ಮಸಿಂಗ್ :– ಯಾವಾಗ ಕೊಡುತ್ತೀರಿ ಎಂದು ಹೇಳಬೇಕಲ್ಲ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೇ, ಈಗಾಗಲೇ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಎಂದು ತಮ್ಮದನ್ನು ಸೇರಿಸಿದ್ದಾರೆ. ನಿನ್ನೆ ಹೇಳಿದಂತೆ ಶ್ರೀಯುತರಾದ ಧರ್ಮಸಿಂಗ್, ಸಿದ್ಧರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಎಸ್.ಎಸ್. ಪಾಟೀಲ್, ಶ್ರೀ ಕೆ.ಶ್ರೀನಿವಾಸಗೌಡ ಹಾಗೂ ಇತರರು ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಜನ ಸಾಮಾನ್ಯರಿಗೆ ಕುಡಿಯುವ ನೀರಿನ ಹಾಗೂ ಜಾನುವಾರುಗಳಿಗೆ ಮೇವಿನ ತೊಂದರೆ ಯುಂಟಾಗಿರುವ. ಬಗ್ಗೆ ನೀಡಿರುವ ಸೂಚನೆ ಮೇಲೆ ಚರ್ಚಿಸುವುದು ಎಂದು ಹೇಳಿ ಕಾರ್ಯಕಲಾಪ ಪಟ್ಟಿಯಲ್ಲಿ ಸೇರಿದೆ. ಆದ್ದರಿಂದ ತಾವು ಇವತ್ತು ಅದನ್ನು ಚರ್ಚೆ ಮಾಡುವುದಕ್ಕೆ ನಮ್ಮದು ಯಾವುದೇ ಆಕ್ಷೇಪಣೆ ಇಲ್ಲ. ನಾವು ಅದಕ್ಕೆ ಸಹಕಾರವನ್ನು ಕೊಡುತ್ತೇವೆ. ಚರ್ಚೆ ಆಗಲಿ. ಆದರೆ ಕಾರ್ಯಕಲಾಪದ ಪಟ್ಟಿಯಂತೆ ಮಾನ್ಯ ಇಕ್ಬಾಲ್ ಅನ್ಸಾರಿಯವರು, ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಮಂತ್ರಿಗಳು ವಿಧೇಯಕವನ್ನು ಮಂಡಿಸುವುದು ಇದೆ. ಆ ನಂತರ ವಿಧೇಯಕವನ್ನು ಪರ್ಯಾಲೋಚನೆ ಮಾಡತಕ್ಕದ್ದು ಇದೆ. ಅದಾದಮೇಲೆ ಪ್ರಾಯಶಃ ಲಂಚ್ ಅವರ್ ಆಗಬಹುದು. ಅದಾದಮೇಲೆ ಅವರಿಗೆ ಎಷ್ಟು ಹೊತ್ತಾದರೂ ಇದನ್ನು ಪ್ರಸ್ತಾಪಿಸಲು ಅವಕಾಶ ಮಾಡಬಹುದು. ಪ್ರಶ್ನೋತ್ತರ ವೇಳೆಯನ್ನು ಬೇಕಾದರೆ ತಾವು ಮುಂದಕ್ಕೆ ಹಾಕಬಹುದು. ಅದನ್ನು ಮಾಡಿ. ಆಮೇಲೆ ಸನ್ಮಾನ್ಯ ಮಾಧುಸ್ವಾಮಿ ಮತ್ತು ಕೆಲವರು 69 ರ ಕೆಳಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ. ನಿಲುವಳಿ ಸೂಚನೆಯನ್ನು ನಂತರ ತೆಗೆದುಕೊಳ್ಳಬಹುದು ಎಂದು ಹೇಳುವುದು ಕಷ್ಟ. ಆದರೆ ಇದು ಬೇರೆ ಸೇವಾ ಸಂಸ್ಥೆಗಳಿಗೆ ಸಂಬಂಧಪಟ್ಟಿರುವುದು ಇದೆ. ಅದಕ್ಕೆ ನಾನು ಸ್ವಲ್ಪ ರೂಲಿಂಗನ್ನು ನೋಡಬೇಕಾಗುತ್ತದೆ. ತಾವು ಕೂಡ ಸಹಕರಿಸಿದರೆ ಅನುಕೂಲವಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾವೇನು ಇನ್ನೂ ಹೇಳಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ವಿಧೇಯಕಗಳು ಮೊದಲು ಆಗಿಬಿಡಲಿ. ವಿಧೇಯಕಗಳು ಮತ್ತೆ ವಿಧಾನ ಪರಿಷತ್ತಿಗೆ ಹೋಗಬೇಕಾಗುತ್ತದೆ.